Reg No. M 1299
Daily & Weekl

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 305] ಬಂಧವಾರ 19—5—1943 [3 ಪೈ

This Space is available for Advt.

Opera -- Aryamala

ಅಪೆರಾ——

ಆರ್ಯಮೂಲಾ !
ಆರ್ಯಮೂಲಾ !
ಅರ್ಯಮೂಲಾ !

ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ, ಶಕುಂತಲ, ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಜರ್ಮನಿ

ಲೋರಿಯಂಟ್ ಬೋರ್ಡೋಕ್ಸ್ ಚೆರ್ಬ್ಸ್‌ಬರ್ಗ್‌ಗಳ ಮೇಲೆ ಅಮೇರಿಕೆ ವಿಮಾನಧಾಳಿ ನಡೆಯಿತು. ಡಜ್ ತೀರವಲ್ಲಿ ಎರಡು ನೌಕಾಗಳು ನೀರಿನ ಪಾಲಾದವು. ಒಂದು ಅಗ್ನಿಜ್ವಾಲೆಗೆ ಆಹುತಿಯಾಯಿತು.

ಆಮ್ಸ್ಟರ್‌ಡಂಕ್ಕಿನಲ್ಲಿ ಎರಡು ಜರ್ಮನ್ ನೌಕೆಗಳು ಆತ್ಮಹತ್ಯಮಾಡಿಕೊಂಡವು

ಡಚ್ ವಿದ್ಯಾರ್ಥಿಗಳನ್ನು ಜರ್ಮನಿಗೆ ಗಡೀಪಾರು ಮಾಡಿರುತ್ತಾರೆ.

ಶಾಂತಿ ಸಾಗರ

ಶಾಂತಿ ಸಾಗರದಲ್ಲಿ ಅಮೇರಿಕನ್ ಸಬ್‌ಮೆರೀನ್‌ಗಳು ಶತ್ರುಗಳ 8 ನೌಕೆಗಳನ್ನು ನಾಶಮಾಡಿದವು. ಸಾಲೋಮನ್ ದ್ವೀಪದಲ್ಲಿ 1 ಶತ್ರು ನೌಕೆಯು ಬೆಂಕಿಗೆ ಆಹುತಿಯಾಯಿತು. ಆಸ್ಟ್ರೇಲಿಯಾ ಹತ್ತಿರ ಒಂದು ಆಸ್ಪತ್ರೆ ನೌಕೆಗೆ ಜಪಾನ್ ಸೈಯರು ಟಾರ್ಪೆಡೊ ಮಾಡಿದರು. 299 ಮಂದಿ ಪತ್ತೆಯಿಲ್ಲ.

ಚೀನಾದಲ್ಲಿ ಜಪಾನಿಯರು 20 ಸಾವಿರ ಸೈನ್ಯಸಮೇತ ಶರಣಾಗಿಸುತ್ತಲು ಮುತ್ತಿಗೆ ಹಾಕಿದರು. ಇದರಲ್ಲಿ 1000 ಜಪಾನಿಯರು ಸತ್ತರು. ಬರ್ಮಾ ರಸ್ತೆಯಲ್ಲಿ ಜಪಾನಿಯರ ಹೊಸ ಸೈನ್ಯ ಒಂದಿದೆ.

ರಷ್ಯಾ

ರಷ್ಯನರು 3 ರಂಗಗಳಲ್ಲಿಯೂ ಭಾರಿ ಸೇನೆ ಜಮಾವಣೆ ಮಾಡಿಕೊಳ್ಳುತ್ತಿರುವರು. ಲಿಸಿಚಾನ್ಸ್‌ಕ್ನಲ್ಲಿ ರಷ್ಯನರದೇ ಮೇಲು ಕೈ ಆಗಿದೆ. ಕ್ಯೂಬಾನಿನಲ್ಲಿ ಉಗ್ರಕದನವಾಗುತ್ತಿದೆ. ನೊವೊರೊಸಿಸ್ಕಿನಲ್ಲಿ ಜರ್ಮನರಿಗೆ ತುಂಬಾ ನಷ್ಟವಾಯಿತು.

ಸಿಲೋನ್ ಮುತ್ತಿಗೆ

ಹಿಂದೆ ಜಪಾನಿಯರು ಸಿಲೋನ್ ದ್ವೀಪಕ್ಕೆ ಮುತ್ತಿಗೆ ಹಾಕುವರೆಂದು ಮುಂಚಿತವಾಗಿ ತಿಳಿಸಿದ ಕೆನಡಿಯನ್ ವಿಮಾನ ಚಾಲಕನೊಬ್ಬನಿಗೆ ಡಿ. ಎಫ್. ಸಿ. ಎಂಬ ಬಿರುದನ್ನು ಕೊಟ್ಟಿದೆ.

ಜಪಾನ್ ಜೀರೋ ತಪ್ಪಿಸಿಕೊಂಡ ರೀತಿ

ಜನರಲ್ ಜೀರೋ ಹೇಗೆ ಜರ್ಮನಿಯಿಂದ ತಪ್ಪಿಸಿಕೊಂಡು ಬಂದನೆಂಬುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುವುದಿಲ್ಲವೇ ? ಜೀರೋ ಮೇಲೆ ಸರ್ಕಾವಲು ! ನಾಜೀ ಜೈಲು ! ಇಂಥಾದ್ದರಲ್ಲಿ ಜೀರೋ ತಪ್ಪಿಸಿಕೊಂಡು ಬರಲು ಬ್ರಿಟಿಷ್ ಮಂತ್ರಿ ಮಿ || ಚರ್ಚಿಲ್ಲರವರ ಬುದ್ಧಿ ಕೌಶಲ್ಯತೆಯು ವ್ಯಕ್ತವಾಗುವುದು. ಬ್ರಿಟಿಷ್ ಮಂತ್ರಿಗಳ ಕೈವಾಡವಿಲ್ಲದೆ ಜೀರೋರವರು ಬರಲು ಆಗುತ್ತಲೇ ಇರಲಿಲ್ಲ. ಇಂಗ್ಲೆಂಡಿನ ಪ್ರಸಿದ್ಧ ಪೋಲೀಸ್ ದಳದ ಕ್ಯೆಪ್ಟನ್ ಲಿಸ್ಟರ್ ಎನ್ನುವರು ಪ್ರಧಾನ ಮಂತ್ರಿಗಳು ಜೀರೋರವರನ್ನು ಕರೆದುಕೊಂಡು ಬರಲು ಈ ಮಹಾ ಪುರುಷನಿಗೆ ಹೇಳಿದರು. ಈ ಜೀರೋ ಬಂದರೆ ತಮ್ಮ ಕಾರ್ಯ ಸುಲಭವಾಗಿ ಆಗುವುದೆಂಬುದು ನಮ್ಮ ಮಂತ್ರಿಯವರಿಗೆ ಗೊತ್ತು, ಇದಕ್ಕೇನೇ ನಮ್ಮ ಚಕ್ರವರ್ತಿಗಳು ಮಿ|| ಚರ್ಚಿಲ್‌ರವರ ಕೈವಾಡದಿಂದ ಟುನಿಷಿಯಾ ಗೆದ್ದಳ್ ಎಂದು ಹೇಳಿರುವರು. ಈ ಲಿಸ್ಟರ್ ಸೆಂಟ್ ನಾಜರಿಯಲ್ಲಿಗೆ ಒಂದು ಫ್ರೆಂಚ್ ಕೂಲಿಗಾರನೆಂದುಕೊಂಡು ಜರ್ಮನಿಗೆ ಕೆಲಸಕ್ಕೆ ಹೋದನು. ಇವನಿಗೆ ಜೈಲಿನಲ್ಲಿ ಬಾಗಿಲುಕಾಯುವ ಕೆಲಸ ಸಿಕ್ಕಿತು. ಇವನಿಂದಲೆ ಜೀರೋ ತಪ್ಪಿಸಿಕೊಂಡ್ದು ಮಾರ್ಸೇಲಸ್‌ಗೆ ಬಂದನಂತರ ಉತ್ತರ ಆಫ್ರಿಕಾಕ್ಕೆ ಬಂದ ವಿಷಯ ಎಲ್ಲರಿಗೂ ತಿಳಿದಿದೆ

ಬರ್ಮ ರಣರಂಗ—ಬರ್ಮಾದಲ್ಲಿ ವಿಶೇಷ ಕಾರ್ಯಾಚರಣೆ ಏನೂ ನಡೆಯಲಿಲ್ಲ. ಅಕಿಯಾಬ್ ನೀರಲೆ ಮಾತ್ರ ಬ್ರಿಟಿಷರು ವಿಮಾನ ಧಾಳಿ ಮಾಡಿದರು. ಪ್ರೋಂ ಮೇಲೂ ಧಾಳಿಯಾಯಿತು.

ಟುನಿಷಿಯಾ—ಟುನಿಷಿಯಾ ಯುದ್ಧ ಮುಕ್ತಾಯವಾಯಿತು. ರಣರಂಗದಲ್ಲಿ ಶತ್ರುಗಳ ಮದ್ದು ಗುಂಡು ಇವುಗಳನ್ನು ಜಪ್ತಿಯಾಗಿಸುವುದೇ ಅಲ್ಲದೆ ಮಿತ್ರಪಕ್ಷದವರನ್ನು ಅರಬ್ಬಿ ಜನರು ಸಂತೋಷದಿಂದ ಎದುರುಗೊಳ್ಳುತ್ತಿರುವರು. ಚಕ್ರವರ್ತಿಗಳ ಸಂದೇಶಕ್ಕೆ ಮಿ|| ಚರ್ಚಿಲ್ಲರು ಚಕ್ರವರ್ತಿಗಳನ್ನು ವಂದಿಸಿ, ಚಕ್ರವರ್ತಿಗಳು ನಾನು ಮಾಡಿರುವ ಸೇವೆಗೆ ಹುಚ್ಚು ಪ್ರಶಸ್ತಿ ಕೊಟ್ಟಿದ್ದೀರಿ ಎಂದು ಹೇಳಿರುವರು.

ಟುನಿಷಿಯಾದಿಂದ ಓಡಿಹೋಗಲು ಆಕ್ಸಿಸ್ ಸೇನೆಗಳನ್ನು ಮಿತ್ರಪಕ್ಷದವರು ಬಿಡಲಿಲ್ಲ. ಭಾರಿಗಾತರಲಿದ್ದರು. ಟುನಿಷಿಯಾದ ಯುದ್ಧದಲ್ಲಿ 193 ಸಾವಿರ ಜನರು ಕೈಸೆರೆ ಸಿಕ್ಕರುವರು ಅವರಲ್ಲಿ 150 ಸಾವಿರ ಜರ್ಮನಿಯರು ಎಂದು ಅಡ್ಮಿರಲ್ ಮೌಂಟಿಸ್ಟೋನ್ ಹೇಳುತ್ತಾರೆ.

ಹತ್ತಿಯ ಕಂಟ್ರಾಕ್ಟ್—ಭಾರತ ಸರ್ಕಾರದವರು ಇನ್ನು ಮೇಲೆ ಯಾರೂ ಹತ್ತಿ ಕಂಟ್ರಾಕ್ಟ್ ಮಾಡಕೂಡದೆಂದು ಆಜ್ಞೆ ಮಾಡಿರುತ್ತಾರೆ

ವಾಷಿಂಗ್‌ಟನ್ ಮಾತು ಕಥೆ—ವಾಷಿಂಗ್‌ಟನ್‌ನಲ್ಲಿ ಮಿ|| ಚರ್ಚಿಲ್‌ರೂ, ಮಿ || ರೂಸ್‌ವೆಲ್ಟರೂ, ಮಿ|| ಮೆಕೆಸಿಕಿಂಗರೂ, ಭಾಗವಹಿಸಿ ಮಾತನಾಡುತ್ತಲೇ ಇರುವರು ಇವತ್ತು ಮಿ|| ಚರ್ಚಿಲ್ಲರು ಅಮೇರಿಕಾ ಕಾಂಗ್ರೆಸ್ಸಿನಲ್ಲಿ ಮಾತನಾಡುವುದರಿಂದ ಈ ಮಾತು ಕಥೆಗಳು ಏನು ಎಂಬುದು ಕೊಂಚವಾದರೂ ತಿಳಿಯಬಹುದು.

ಜರ್ಮನಿ ಆಣೆಕಟ್ಟು—ರೂರ್ ಮೇಲೆ ಧಾಳಿಮಾಡಿ ಎರಡು ಆಣೆಕಟ್ಟುಗಳನ್ನು ನಾಶಮಾಡಿದ್ದರಿಂದ ಕಾಲುವೆಗಳು ಭರ್ತಿಯಾಗಿ ವ್ಯವಸಾಯ ಕಾರ್ಖಾನೆಗಳು ಹಾಳಾಗುತ್ತಾ ಇವೆ. ಸಾವುಗಳು ಕೂಡ ಆಗಿವೆ. ಕೆಲವು ಕಡೆ ನೀರನ್ನು ಕಡಿಯಲು ಜನರಿಗೆ ಇಲ್ಲದಹಾಗಾಗಿದೆ.

ಈಡನರ ಸಂದೇಶ

ಫಾರನ್ ಸೆಕ್ರೆಟರಿ ಮಿ|| ಆಂಥೋನಿ ಈಡನ್‌ರವರು ಬೆಲಜಿಯಂ ಪ್ರಜೆಗಳಿಗೆ ನಾವ್ ಹೇಗೆ ನಿಮ್ಮನ್ನು ಉದ್ಧಾರ ಮಾಡಲು ಬರುವೆವು ಎಂದು ಹೇಳಿರುವರು

ಮುಸಲೋನಿ ಹಾಜರಿರಲಿಲ್ಲ

ಇಟಲಿಯ ಚಕ್ರವರ್ತಿಯು ಆರ್ಟ್ ಎಗ್ಜಿಬಿಷನ್ ಪ್ರಾರಂಭೋತ್ಸವದಲ್ಲಿ ಮುಸಲೋನಿಯು ಹಾಜರಿರಲಿಲ್ಲ. ರಾಜರು ಬಂದಾಗ ಪ್ರಜೆಗಳು ಹರ್ಷ ಧ್ವನಿ ಮಾಡಿದರು.

ಸರ್ಚರ್‌ಲೈಟ್ ಸ್ಟೇಷನ್‌ಗೆ ಮೇಲ್ ರೈಲ್ವೆ ಗಾಡಿಯು ಬಂದು ನಿಲ್ಲುವಾಗ ಬ್ರಹ್ಮರಾಗಿ ಡಿಕ್ಕಿ ಹೊಡೆದು ಅನೇಕರಿಗೆ ಘಾಯಗಳಾದವು. ಇಂಜಿನ್ ಫೈರ್‌ಮನ್‌ಗೆ ಪೂರಾ ಘಾಯಗಳಾದವು.

ಮೃತ ದೇಹದ ನರಗಳು ಸಜೀವ ದೇಹಕ್ಕೆ

ಖಾರ್ಕೋವ್ ರಣ ಭೂಮಿಯಲ್ಲಿ ಸೋವಿಯೆಟ್ ಡಾಕ್ಟರರು ಒಂದು ಹೊಸ ಪ್ರಯೋಗ ಮಾಡಿರುವರು. ಕೈಯು ಸ್ವಾಧೀನಗಳು ಕಡಿದು ಬಿದ್ದ ಒಬ್ಬ ಸೈನಿಕನಿಗೆ ಮೃತಸೊಬ್ಬನ ಸ್ನಾಯುವನ್ನು ಕತ್ತರಿಸಿಟ್ಟು ಹೊಲಿದು, ಪುನಃ ಕೈಯು ಮೊದಲಿನಂತೆಯೇ ಉಪಯೋಗಕ್ಕೆ ಬರುವ ಹಾಗೆ ಮಾಡಿರುವರು. ವೈದ್ಯಕೀಯ ಪ್ರಪಂಚಕ್ಕೆ ಈ ಹೊಸ ಶೋಧದಿಂದ ಅಮಿತ ಗುಣವಿದೆ

ಇಟಲಿ

ಮಿತ್ರ ಸೇನೆಗಳು ದಂಡೆಯಾತ್ರೆ ಮಾಡುತ್ತಾರೆಂದು ಜರ್ಮನಿಯವರು ಇಟಲಿ ಸಿದ್ಧತೆ ಮಾಡಿಕೊಳ್ಳುತ್ತಿವೆ. ಟ್ಯೂನಿಸ್ ಮೇಲಿನ ಆಸೆ ಮುಸಲೋನಿಗೆ ಇನ್ನೂ ಬಿಟ್ಟಿಲ್ಲ. ಕಾರ್ಸಿಕಾ ಸಾರ್ಡಿನಿಯಾಗಳನ್ನು ಭದ್ರಪಡಿಸಿಕೊಳ್ಳುತ್ತಿರುವರು.

ರೋಂ ನಗರದ ಸುತ್ತಮುತ್ತಲಲ್ಲಿ ಈಗ ವಿಮಾನ ಧಾಳಿಗೆ ಪ್ರಾರಂಭವಾಗಿದೆ. ರೋಂನಲ್ಲಿ ವಿಮಾನಧಾಳಿ ಎಚ್ಚರಿಕೆ ಕೊಡಲಾಗುತ್ತಿದೆ.

ವರ್ತಮಾನ

ಸೂತನ ಇಂಡೋರು ದಿವಾನರು ನಿನ್ನೆ ಮಿಸಸ್ ಹೊಸ ಪಾಪ್ಟೇ ಮೇಲೆ ಒಂದರು.

ಂ ಂ

ಪೆರ್ಮಾರ್ಕಿನ ಥೊರೆಯು ಆಕಾಶ ವಾಣಿಯಲ್ಲಿ ೪ ನಿಮಿಷಗಳು ಮಾತ ನಾಡಿದರು. ಬ್ರಿಟಿಷಿಯನ್ನರು ತಾಳ್ಮೆ ತೆಗೆದುಕೊಳ್ಳಬೇಕು. ಜೇಗನೇ ಎಲ್ಲವೂ ಒಳ್ಳೆಯದಾಗುವದು, ಎಂ ಬುದೇ ಇವರ ಭಾಷಣದ ಸಾರಾಂಶ.

ಹೆಚ್ಚಾಗಿ ಆಹಾರ ಬೆಳೆ ಮಾಡಲು ಹೆಸರಾಬಾದು ನೈಜಾಂಸರು 34 ಲಕ್ಷ ರೂಪಾಯಿಗಳನ್ನು ಕೂಡಲೇ ಕೊಡುವರು.

ಂ ಂ

ಜ್ಯುವಿಷಿಯಾ ಯುನೈವರ್ಸಲ್ಲಿ ಗೆದಿ ಪ್ಪಕ್ಕೊಪ್ಪಡ ಮಾರ್ಷಲ್ ಚಿಂಗ್ ಕಾ ಯಿಷೇಕರು ವಿ॥ ರೂಸ್ವೆಲ್ಟರಿಗೆ ಅಭಿ ನುದನವನ್ನು ಕಳಿಸಿದರು. ಇದಕ್ಕೆ ಉತ್ತರವಾಗಿ ವಿ॥ ರೂಸ್ವೆಲ್ಟರು ಜೈ ನಾ ಸಹಾಯದಿಂದ ಕೂಡಲೇ ನಿಮ್ಮ [redacted] ಹೇಳಿಕೊಂಡಿದ್ದಾರೆ.

ಂ ಂ

ಇಂಡಿಯಾಕ್ಕೆ ವಿ॥ ರೂಸ್ವೆಲ್ಟರ ಪ್ರತಿನಿಧಿಯಾಗಿ ಬಂದಿದ್ದ ವಿಲಿಯಂ ಫಲಿಪ್ಸರು ತನ್ನ ಇಂಡಿಯಾ ಪ್ರವಾಸ ದ ಹಪ್ಪೀಲನ್ನು ಹೇಳಲು ಅವಕಾಶ ಕೊಡಿ ಎಂದು ನ್ಯೂಯಾರ್ಕಿನಲ್ಲಿರುವ ಜವೆಳಿಕಾ ಇಂಡಿಯಾ ಲೀಗಿನವರ ಪ್ರೆಸಿಡೆಂಟಾದ ವಿ॥ ಸರದಾರ್ ಜೆ. ಜೆ. ಸಿಂಗರು ವಿ॥ ರೂಸ್ವೆಲ್ಟರನ್ನು ಕೇಳಿರುವರು.

ಂ ಂ

ಬಂಗಾಳದ ಪ್ರಧಾನ ಮಂತ್ರಿಯಾದ ಸರ್ ನಜೀಮುದ್ದೀನರವರು ಹಿಂದೂಗಳು ತನಗೆ ಸಹಾಯ ಮಾಡ ಬೇಕೆಂದು ಕೇಳಿಕೊಂಡಿರುವರು.

ಮಿಶ್ರಪಕ್ಷದವರ ಮಿಮಾನ ಧಾಳಿ ಟನ್ನು ಸಹಿಸಲಾರದೆ. ಇಟಲಿ ಪ್ರಜೆ ಗಳು ರೋಂ ನಗರವನ್ನು ಸೇರುತ್ತಿ ದ್ದಾರೆ. ಈಗಾಗಲೇ 3 ಲಕ್ಷಕ್ಕೆ ಮಿಕ್ಕಾರಿ ಬಂದಿರುತ್ತಾರೆ ಇನ್ನೂ ಹೆಚ್ಚಾ ಗಿ ಬರಮಿಸಲು ರೋಂ ನಗರಕ್ಕೆ ಬರುವ ರಸ್ತೆಗಳಲ್ಲಿ ಭಾಟಗಳನ್ನು ಹಾಕಿ ತಡೆ ಯುತ್ತಿರುವರು.

Edited, Printed & published by M. S. Krishna Rao, at the Satyavadi Press. Chamaraja Road, Mysore.

ಸಂಸ್ಥಾನದ ಸುದ್ದಿಗಳು

ಚಿತ್ರದುರ್ಗದಲ್ಲಿರುವ ಶ್ರೀ ಕೆ. ಜಿ. ಸತ್ಯನಾರಾಯಣ ಶೆಟ್ಟರು 30 ದಿವಸ ಉಪವಾಸವನ್ನು ಯಶಸ್ವಿಯಾಗಿ ಮುಗಿಸಿದರು.

ಹೈಕೋರ್ಟುಗಳಲ್ಲಿ ತೀರ್ಪುಗಳನ್ನು ಶೀಘ್ರಗೊಳಿಸಲು ಒಂದು ಹೊಸ ಶಾಖೆಯನ್ನು ನಿರ್ಮಾಣ ಮಾಡಿರುತ್ತಾರೆ. ಇದಕ್ಕೆ ಬೆಂಗಳೂರಿನ ಅಡ್ವೊಕೇಟರಾದ ಶ್ರೀಮಾನ್ ಡಿ. ಆರ್. ನರಸಿಂಗರಾಯರನ್ನು ಸರ್ಕಾರದವರು ನೇಮಿಸಿರುವರು.

ನಾಳೆ ಶುಕ್ರವಾರ ಟಿನಿಷಿಯ ವಿಜಯ ಉತ್ಸವದಲ್ಲಿ ಗೌಪ್ಯ ನೆಂಟ್ ಹೌಸಿನಿಂದ ಸೇನೆಗಳ ಮಂಪಣಿಗೆಯೂ, ಸಾಯಂಕಾಲ ಟೌನ್‌ಹಾಲಿನಲ್ಲಿ ಉಪ ನ್ಯಾಸವೂ, ವಿದ್ಯಾರ್ಥಿಗಳಿಗೆ ತಿಂಡಿ ಹಂಚುವಿಕೆಯೂ, ದೇವಸ್ಥಾನಗಳಲ್ಲಿ ದೇವರ ಪ್ರಾರ್ಥನೆಯೂ ನಡೆಯುವುದೆಂದು ತಿಳಿಯಬರುತ್ತೆ. ಟವರ್‌ಹಾಲಿನಲ್ಲಿ ನಡೆಯುವ ಕಾರ್ಯಕಲಾಪಗಳಿಗೆ ಮಾ॥ ಜಿ. ಯುವ [redacted] ಭಾಗವಹಿಸುವರು.

ಹೈಸೂರಿನಲ್ಲಿ ಹರಿಜನರು ಮಧ್ಯ ಸೇವನೆ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವರು.

ನಿವೃತ್ತ ಛೀಫ್ ಇಂಜನೀಯರ್ ಎಂ. ಶ್ರೀನಿವಾಸರವರನ್ನು ಕೊಟ್ಟೂರು ಸಂಘನ ಸಂಸ್ಥಾನದ ಚೀಫ್ ಇಂಜನಿಯರ್ ರಾಗಿ ನೇಮಕರಾಗಿರುವರು.

ನಿನ್ನೆ ಬೆಂಗಳೂರಿನಲ್ಲಿ 43 ರಾಜಕೀಯ ಖೈದಿಗಳನ್ನು ಬಿಟ್ಟರು. ಮೈಸೂರಿನಲ್ಲಿ 21 ಮಂದಿಯನ್ನು ಬಿಡುತ್ತಾರೆ. ಕೆಲವರು 19 ಮಂದಿ ಮುಂದೆ ತಾವು ಜಟು ವಟಿಕೆಗಳಲ್ಲಿ ಭಾಗವಹಿಸುವುದಿಲ್ಲವೆಂದು ಭರವಸೆ ಕೊಟ್ಟರೆ ಅವರನ್ನು ಬಿಡುವರು. ಅನೇಕರನ್ನು ಪೆರೋಲ್ ಮೇಲೆ ಬಿಡುತ್ತಿರುವರು.

ಮೂಗೂರು ಕೊಲೆಪಾತಕರು ಇನ್ನೂ ಪತ್ತೆಯಾಗಿಲ್ಲ.

ಮೈಸೂರು ಆಯವ್ಯಯದಲ್ಲಿ 3 ಲಕ್ಷ ರೂಪಾಯಿ ಉಳಿತಾಯವಾಗಬಹುದೆಂದು ತಿಳಿಯಬರುತ್ತೆ.

ಚಾಮರಾಜನಗರದ ದೊಂಬಿ ಮೊಕದ್ದಮ್ಮೆಗೆ ಮಾ॥ ಸಫಿದಾರಾಪಾರವರನ್ನು ವಿಶೇಷ ನ್ಯಾಯಾಧೀಶರನ್ನಾಗಿ ಮಾಡುವರೆಂದು ತಿಳಿಯಬರುವುದು

ಸತ್ಯವಾದಿ ಪತ್ರಿಕೆಗೆ ಚಂದಾದಾರರಾಗಿರಿ

ತಂಗಳಿಗೆ 0—6—೦

ಹೆಚ್. ಆರ್. ಜಿ. ಸಿ. [redacted] ಅವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೆಳಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮುಕುದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ. ಎ. [redacted]ಪಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್
ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು.

ಶಕ್ತಿ ಸಾಧನೆಗೆ ಸುಲಭೋಪಾಯವು

ಸಿದ್ಧಿ

ಸೇವನೆ ಎಂಬುವುದು ನಿಮ್ಮ ಜ್ಞಾಪಕದಲ್ಲಿರಲಿ

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ

ಬೆಲೆ 1 ರೂಪಾಯಿ

ಅಕ್ಕರ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ. ಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

For All Kinds of
Printing & Binding

The Satyavadi Press

Chamarajapuram
Mysore